**ದಿನಾಂಕ ೩ 15–10–2022 ರಂದು ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು**
**--------------------------------------------------------------**
**ಪಾಟೀ ಸವಾಲು ಶ್ರೀ.ಎಮ್.ಆರ್. ವಕೀಲರಿಂದ:–**

ವಾದಿಯು ನನ್ನ ಅಳಿಯ. 2 ನೇ ಪ್ರತಿವಾದಿಗೆ ಮತ್ತು ವಾದಿಗೆ ಯಾವುದೇ ಸಂಬಂಧ ಇರುವುದಿಲ್ಲ. ವಾದಿಯ ತಂದೆಗೆ ಒಟ್ಟು 4 ಜನ ಸಹೋದರರು ಇರುತ್ತಾರೆ. 4 ಜನ ಸಹೋದರರು 20-25 ವರ್ಷಗಳ ಹಿಂದೆ ಬೇರೆಯಾಗಿರುತ್ತಾರೆ. ವಾದಿಯ ತಾಯಿ 1995 ರಲ್ಲಿ ಮೂಲ ದಾವ ನಂ.44/1995 ಅಂತಾ ವಾದಿಯ ಪರವಾಗಿ 1 ನೇ ಪ್ರತಿವಾದಿಯ ವಿರುದ್ಧ ಹೂಡಿದ್ದಳು ಎಂದರೆ ಸರಿ. ಅದಕ್ಕಿಂತ ಮೊದಲೇ 1 ನೇ ಪ್ರತಿವಾದಿ ಹೊಲಗಳನ್ನು ಮಾರಾಟ ಮಾಡಿದ್ದ ಎಂದರೆ ಸರಿ. ಸದರಿ ಹೊಲವನ್ನು 2 ನೇ ಪ್ರತಿವಾದಿಗೆ 1992-93 ರಲ್ಲಿ ಮಾರಾಟ ಮಾಡಿದ್ದ. ಸದರಿ ಮಾರಾಟ ಮಾಡಿ ವಿಷಯು ವಾದಿಗೆ ಅವರ ತಾಯಿಗೆ ಗೊತ್ತಿರುತ್ತದೆ. ಈಗ ವಾದಿ ಮತ್ತು ಅವರ ಹೆಂಡತಿಯು ವಾದಿಯ ತಾಯಿಯಿಂದ ಬೇರೆಯಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ವಾದಿಯ ಪಾಲಿನಲ್ಲಿರುವ ಹೊಲಗಳು ಅವನ ಹೆಸರಿನಲ್ಲಿರುತ್ತವೆ. ಮಾರಾಟ ಮಾಡಿರುವ ಆಸ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಖರೀದಿ ಮಾಡಿದಾಗಿನಿಂದ ಖರೀದಿಸುವವರು ತಮ್ಮ ಆಸ್ತಿಗಳಲ್ಲಿ ಕಬ್ಜೆ ವಹಿವಾಟಿನಲ್ಲಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ತಾನು ಖರೀದಿಸಿರುವ ಆಸ್ತಿಯನ್ನು 4 ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾನೆ ಎಂದರೆ ಸರಿ. ನನ್ನ ಅಳಿಯನಿಗೆ ಸಹಾಯ ಮಾಡಲು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ
**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು